ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **816**
ಸದಸ್ಯರ ಹೆಸರು : ಶ್ರೀ ಎನ್.ಅಪ್ಪಾಜಿ ಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 20.09.2021
ಉತ್ತರಿಸುವ ಸಚಿವರು : ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು.

*****

	ಪ್ರಶ್ನೆ	ಉತ್ತರ
ಅ)	ಮಂಡ್ಯ ಜಿಲ್ಲೆ ವ್ಯಾಪ್ತಿಯಲ್ಲಿ ಪ್ರಸ್ತುತ ನಿರಂತವಾಗಿ ಎಷ್ಟು ಸಮಯ ರೈತರ ಪಂಪ್‌ಸೆಟ್ಟ್‌ಗೆ ವಿದ್ಯುತ್ ನೀಡಲಾಗುತ್ತಿದೆ: ಈ ಸಂಬಂಧ ಸರ್ಕಾರದ ಸುತ್ತೋಲೆಯನ್ವಯ ಎಷ್ಟು ಸಮಯ ವಿದ್ಯುತ್ ಪೂರೈಸಬೇಕು. (ಪ್ರಸ್ತುತ ಪೂರೈಸುತ್ತಿರುವ ವಿವರವನ್ನು ತಾಲ್ಲೂಕುವಾರು ನೀಡುವುದು)	ಪ್ರಸ್ತುತ ಮಂಡ್ಯ ಜಿಲ್ಲೆ ವ್ಯಾಪ್ತಿಯಲ್ಲಿ ಒಟ್ಟು 63 ಸಂಖ್ಯೆ ವಿದ್ಯುತ್ ಉಪಕೇಂದ್ರಗಳಿದ್ದು, 260 ಸಂಖ್ಯೆ ಫೀಡರ್ ಗಳಿಂದ ರೈತರ ನೀರಾವರಿ ಪಂಪ್ ಸೆಟ್ ಗಳಿಗೆ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ಸದರಿ ಫೀಡರ್ ಗಳ ಪೈಕಿ ತಾಂತ್ರಿಕ ಸಾಧ್ಯತೆ ಇರುವ 40 ಫೀಡರ್ ಗಳಲ್ಲಿ (ಮಳವಳ್ಳಿ ತಾಲ್ಲೂಕಿನ 1 ಸಂಖ್ಯೆ ಉಪಕೇಂದ್ರದಿಂದ ಹೊರಹೊಮ್ಮುವ 3 ಸಂಖ್ಯೆಯ ಫೀಡರ್, ಶ್ರೀರಂಗಪಟ್ಟಣ ತಾಲ್ಲೂಕಿನ 2 ಸಂಖ್ಯೆ ಉಪಕೇಂದ್ರಗಳಿಂದ ಹೊರಹೊಮ್ಮುವ 2 ಪೀಡರ್ ಹಾಗೂ ಕೆ.ಆರ್. ಪೇಟೆ ತಾಲ್ಲೂಕಿನ 6 ಸಂಖ್ಯೆಯ ಉಪಕೇಂದ್ರಗಳಿಂದ ಹೊರಹೊಮ್ಮುವ 35 ಫೀಡರ್ ಗಳಲ್ಲಿ) ರೈತರ ನೀರಾವರಿ ಪಂಪ್ ಸೆಟ್ ಗಳಿಗೆ ಪ್ರಸ್ತುತ ಪ್ರತಿದಿನ ಹಗಲಿನ ವೇಳೆಯಲ್ಲಿ ನಿರಂತರ 7 ಗಂಟೆಗಳ ಕಾಲ 3 ಫೇಸ್ ವಿದ್ಯುತ್ ಸರಬರಾಜು ಪೂರೈಸಲಾಗುತ್ತಿದೆ. ತಾಂತ್ರಿಕ ಸಾಧ್ಯತೆ ಇಲ್ಲದ ವಿದ್ಯುತ್ ಉಪಕೇಂದ್ರಗಳಿಂದ ಹೊರಹೊಮ್ಮುವ 220 ಸಂಖ್ಯೆಯ ಗ್ರಾಮೀಣ/ಕೃಷಿ ವಿದ್ಯುತ್ ಫೀಡರ್ ಗಳಲ್ಲಿ ಪ್ರಸ್ತುತ ಪ್ರತಿದಿನ ಹಗಲು ವೇಳೆ 4:00 ಗಂಟೆ ಹಾಗು ರಾತ್ರಿ 3:00 ಗಂಟೆ, ಒಟ್ಟು 7:00 ಗಂಟೆಗಳ ಕಾಲ 3 ಫೇಸ್ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ಅನಿವಾರ್ಯ ಸಂದರ್ಭಗಳಲ್ಲಿ ವಿದ್ಯುತ್ ಲಭ್ಯತೆ /ಉತ್ಪಾದನೆ ಕುಂಠಿತವಾದಾಗ ಅಥವಾ ವಿದ್ಯುತ್ ಜಾಲದಲ್ಲಿ ಅಡಚಣೆ ಉಂಟಾದಾಗ ಮಾತ್ರ ತಾತ್ಕಾಲಿಕವಾಗಿ ವಿದ್ಯುತ್ ಜಾಲದ ಸುರಕ್ಷತಾ ದೃಷ್ಟಿಯಿಂದ ಅಲ್ಪ ಪ್ರಮಾಣದಲ್ಲಿ ವಿದ್ಯುತ್ ಕಡಿತ ಮಾಡಲಾಗುತ್ತದೆ.
ಆ)	ಮಂಡ್ಯ ಜಿಲ್ಲಾ ವ್ಯಾಪ್ತಿಯಲ್ಲಿ ಹೊಸದಾಗಿ 66/11 ಕೆ.ವಿ ವಿದ್ಯುತ್ ವಿತರಣಾ ಕೇಂದ್ರಗಳ ಅವಶ್ಯಕತೆ ಇದೆ: (ತಾಲ್ಲೂಕುವಾರು ವಿವರ ನೀಡುವುದು)	ಮಂಡ್ಯ ಜಿಲ್ಲಾ ವ್ಯಾಪ್ತಿಯಲ್ಲಿ ಹೊಸದಾಗಿ ಸ್ಥಾಪಿಸಲು ಉದ್ದೇಶಿಸಲಾಗಿರುವ 66/11 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರಗಳ ತಾಲ್ಲೂಕುವಾರು ಕಾಮಗಾರಿಗಳ ಮಾಹಿತಿಗಳನ್ನು **ಅನುಬಂಧದಲ್ಲಿ** ಒದಗಿಸಲಾಗಿದೆ.
ಇ)	ನಾಗಮಂಗಲ ತಾಲ್ಲೂಕು ಕಸಬಾ ಹೋಬಳಿ ಬಾಳಿನಕೊಪ್ಪಲು (ಪಡುವಲಪಟ್ಟಣ) ವ್ಯಾಪ್ತಿಯಲ್ಲಿ 66/11 ಕೆ.ವಿ ವಿತರಣಾ ಘಟಕ ಸ್ಥಾಪಿಸಲು ಮಂಜೂರಾತಿ ಆಗಿದ್ದರೂ ಈವರೆವಿಗೂ ಈ ಕಾಮಗಾರಿ	ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ಕಸಬಾ ಹೋಬಳಿ ಬಾಳನಕೊಪ್ಪಲು (ಪಡುವಲಪಟ್ಟಣ) ವ್ಯಾಪ್ತಿಯಲ್ಲಿ 1*12.5 ಎಂ.ವಿ.ಎ 66/11 ಕೆ ವಿ ವಿತರಣಾ ಕೇಂದ್ರ ಸ್ಥಾಪಿಸುವ ಪ್ರಸ್ತಾವನೆಯು ದಿನಾಂಕ 18.05.2020 ರಂದು ನಡೆದ 83ನೇ ಟಿ.ಸಿ.ಸಿ.ಎಮ್ ನಲ್ಲಿ ಅನುಮೋದನೆಗೊಂಡಿರುತ್ತದೆ. ಸದರಿ ವಿವಿ ಕೇಂದ್ರ ನಿರ್ಮಿಸಲು ಸರ್ಕಾರಿ ಜಾಗವನ್ನು ಗುರುತಿಸಿ ಮಂಜೂರು ಮಾಡಿಕೊಡಲು ದಿನಾಂಕ 18.06.2020 ರಂದು ತಹಶಿಲ್ದಾರ್,

...2

	ಪ್ರಾರಂಭವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ವಿಳಂಬಕ್ಕೆ ಕಾರಣಗಳೇನು: ಯಾವ ಕಾಲಮಿತಿಯೊಳಗೆ ಈ ಕಾಮಗಾರಿ ಪೂರ್ಣಗೊಳ್ಳುವುದು:	ನಾಗಮಂಗಲ ರವರಿಗೆ ಪತ್ರ ಬರೆಯಲಾಗಿತ್ತು, ಆದರೆ ಆ ಜಮೀನು ಈಗಾಗಲೇ ಬೇರೆಯವರಿಗೆ ಮಂಜೂರಾಗಿದೆ ಎಂದು ಕಂದಾಯ ಇಲಾಖೆಯಿಂದ ತಿಳಿದು ಬಂದಿರುವುದರಿಂದ ಪರ್ಯಾಯ ಜಮೀನನ್ನು ಗುರುತಿಸುವ ಕಾರ್ಯ ಪ್ರಗತ್ತಿಯಲ್ಲಿದೆ.
ಈ)	ಇದೇ ಸಮಯದಲ್ಲಿ ತಾಲ್ಲೂಕು ವ್ಯಾಪ್ತಿಯಲ್ಲಿ ಮಂಜೂರಾದ ಮಾದಿಹಳ್ಳಿ, ಬುರಡಗುಂಟೆ, ನೀಲಕಂಠನಹಳ್ಳಿ, ಗೊಂಡೇನಹಳ್ಳಿ ವಿತರಣಾ ಘಟಕಗಳ ಕಾಮಗಾರಿ ಯಾವ ಹಂತದಲ್ಲಿದೆ: (ಘಟಕವಾರು ವಿವರ ನೀಡುವುದು)	ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ವ್ಯಾಪ್ತಿಯಲ್ಲಿ ಮಾದಿಹಳ್ಳಿ, ಬುರಡಗುಂಡೆ, ನೀಲಕಂಠನಹಳ್ಳಿ, ಗೊಂಡೇನಹಳ್ಳಿ ವಿತರಣಾ ಘಟಕಗಳ ಕಾಮಗಾರಿಗಳಿಗೆ ಸ್ಥಳ ಗುರುತಿಸುವ ಹಂತದಲ್ಲಿದೆ.
ಉ)	ನಾಗಮಂಗಲ ತಾಲ್ಲೂಕು ಕಾಳಿಂಗಹಳ್ಳಿ, ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅಂಕನಹಳ್ಳಿ, ಹೊಸೂರು, ದೊಡ್ಡಗುಣಿ, ಶಿವನಹಳ್ಳಿ, ಕವಲಗುಂದಿ ಮತ್ತು ಕತರಗುಪ್ಪೆ ಗ್ರಾಮಗಳಲ್ಲಿ ಇಲ್ಲಿಯವರೆವಿಗೂ ನಿರಂತರ ವಿದ್ಯುತ್ ಸಂಪರ್ಕ ಯೋಜನೆಯಡಿ ವಿದ್ಯುತ್ ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ವಿಳಂಬಕ್ಕೆ ಕಾರಣಗಳೇನು: ವಿಳಂಬಕ್ಕೆ ಕಾರಣರಾದ ಇಲಾಖಾ ಅಧಿಕಾರಿಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ: (ವಿವರ ನೀಡುವುದು)	ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ಕಾಳಿಂಗಹಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಯ ಅಂಕನಹಳ್ಳಿ ಕವಲಗುಂದಿ, ಹೊಸೂರು, ದೊಡ್ಡಗುಣಿ, ಶಿವನಹಳ್ಳಿ, ಕತ್ತರಗುಪ್ಪೆ ಗ್ರಾಮಗಳಿಗೆ ನಿರಂತರ ವಿದ್ಯುತ್ ಸಂಪರ್ಕ ಕಲ್ಪಿಸಲು ಡಿಡಿಯುಜಿಜೆವೈ ಅಡಿಯಲ್ಲಿ ಮೈಲಾರಪಟ್ಟಣ ಫೀಡರ್ ಅನ್ನು ಪ್ರಸ್ತಾಪಿಸಲಾಗಿತ್ತು. ಅವಾರ್ಡ್ ಮೊತ್ತ ಹಾಗೂ ಯೋಜನೆಯ ಅವಧಿ ಪೂರ್ಣಗೊಂಡಿದ್ದರಿಂದ ಸದರಿ ಗ್ರಾಮಗಳಲ್ಲಿ ಡಿಡಿಯುಜಿಜೆವೈ ಯೋಜನೆಯಡಿ ಕಾಮಗಾರಿಗಳನ್ನು ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ.
ಊ)	ಈ ಗ್ರಾಮಗಳಿಗೆ ಯಾವ ಕಾಲಮಿತಿಯೊಳಗೆ ನಿರಂತರ ವಿದ್ಯುತ್ ಯೋಜನೆ ಅನುಷ್ಠಾನ ಮಾಡಲಾಗುವುದು? (ವಿವರ ನೀಡುವುದು)	ಚಾವಿಸನಿನಿಯ ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ಕಾಳಿಂಗಹಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಯ ಅಂಕನಹಳ್ಳಿ ಕವಲಗುಂದಿ, ಹೊಸೂರು, ದೊಡ್ಡಗುಣಿ, ಶಿವನಹಳ್ಳಿ, ಕತ್ತರಗುಪ್ಪೆ ಗ್ರಾಮಗಳಿಗೆ ಹೊಸದಾಗಿ ವಡೆರಹಳ್ಳಿ ವಿದ್ಯುತ್ ವಿತರಣಾ ಕೇಂದ್ರದಿಂದ ಹೊಸ ಫೀಡರ್ ನಿರ್ಮಿಸಲು ರೂ.1.25 ಕೋಟಿ ಮೊತ್ತಕ್ಕೆ ಅಂದಾಜುಪಟ್ಟಿ ತಯಾರಿಸಿದ್ದು, RDSS ಯೋಜನೆಯಡಿ ಕಾಮಗಾರಿಯನ್ನು ಕೈಗೊಳ್ಳಲಾಗುವುದು.

ಸಂಖ್ಯೆ: ಎನರ್ಜಿ 213 ಇಬಿಎಸ್ 2021

(ವಿ ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ
ಮತ್ತು ಸಂಸ್ಕೃತಿ ಸಚಿವರು.

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ.ಎನ್.ಅಪ್ಪಾಜಿ ಗೌಡ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:816ಕ್ಕೆ ಅನುಬಂಧ

ಮಂಡ್ಯ ಜಿಲ್ಲೆ ವ್ಯಾಪ್ತಿಯಲ್ಲಿ ಹೊಸದಾಗಿ ಸ್ಥಾಪಿಸಲು ಉದ್ದೇಶಿಸಿರುವ 66/11 ಕೆವಿ ವಿದ್ಯುತ್ ವಿತರಣಾ ಕೇಂದ್ರಗಳ ತಾಲ್ಲೂಕುವಾರು ವಿವರಗಳು

ಕ್ರ. ಸಂ.	ಕಾಮಗಾರಿ ಹೆಸರು	ತಾಲ್ಲೂಕು	ಪ್ರಸ್ತುತ ವಸ್ತು ಸ್ಥಿತಿ
1	ನಾಗಮಂಗಲ 220/66/11 ಕೆವಿ ವಿದ್ಯುತ್ ಸ್ವೀಕರಣಾ ಕೇಂದ್ರ	ನಾಗಮಂಗಲ	ಕಾಮಗಾರಿಯು ಪ್ರಗತಿಯಲ್ಲಿದೆ.
2	"ಮದ್ದೂರು ಸರಹದ್ದು (ಸೋಮನಹಳ್ಳಿ ಕೈಗಾರಿಕ ಪ್ರದೇಶ)" 220/66 ಕೆವಿ ವಿದ್ಯುತ್ ಸ್ವೀಕರಣಾ ಕೇಂದ್ರ	ಮದ್ದೂರು	ಸದರಿ ಪ್ರಸ್ತಾವನೆಯು 86ನೇ ಟಿಸಿಸಿಎಮ್ ನಲ್ಲಿ ಅನುಮೋದನೆಗೊಂಡಿದ್ದು, ಸರ್ಕಾರಿ ಜಮೀನನ್ನು ಕವಿಪ್ರನಿನಿಗೆ ದಿನಾಂಕ 22.09.2020 ರಂದು ಹಸ್ತಾಂತರಿಸಲಾಗಿದ್ದು, ಅಂದಾಜು ಪಟ್ಟಿ ತಯಾರಿಕ ಹಂತದಲ್ಲಿದೆ.
3	ಸುಂಕತೊಣ್ಣೂರು: 1*8 ಎಂವಿಎ, 66/11 ಕೆವಿ	ಪಾಂಡವಪುರ	ಸದರಿ ಪ್ರಸ್ತಾವನೆಯು 86ನೇ ಟಿಸಿಸಿಎಮ್ ನಲ್ಲಿ ಅನುಮೋದನೆಗೊಂಡಿದೆ. ಸರ್ಕಾರಿ ಜಮೀನು ಹಂಚಿಕೆಯಾಗಿ ಹಸ್ತಾಂತರಗೊಂಡಿದೆ. ಅಂದಾಜುಪಟ್ಟಿ ತಯಾರಿಕಾ ಹಂತದಲ್ಲಿದೆ.
4	ನಾರಾಯಣಪುರ/ಕಡಬ: 1*8 ಎಂವಿಎ, 66/11 ಕೆವಿ ಕೆ.ಆರ್.ಪೇಟೆ-ಬೂಕನಕೆರೆ ಲಿಲೊ ಲೈನ್ - 1 ಸ್ಪಾನ್	ಪಾಂಡವಪುರ	ಸದರಿ ಪ್ರಸ್ತಾವನೆಯು 80ನೇ ಟಿಸಿಸಿಎಮ್ ನಲ್ಲಿ ಅನುಮೋದನೆಗೊಂಡಿದ್ದು, ಸರ್ಕಾರಿ ಜಮೀನು ಹಂಚಿಕೆಯಾಗಿದೆ. ಅಂದಾಜುಪಟ್ಟಿ ತಯಾರಿಸುವ ಹಂತದಲ್ಲಿದೆ.
5	ಮಡುವಿನಕೋಡಿ / ದೊಡ್ಡಯಾಚೇನಹಳ್ಳಿ 1*8 ಎಂವಿಎ, 66/11 ಕೆವಿ	ಕೆ.ಆರ್.ಪೇಟೆ	ಸದರಿ ಪ್ರಸ್ತಾವನೆಯು 86ನೇ ಟಿಸಿಸಿಎಮ್ ನಲ್ಲಿ ಅನುಮೋದನೆಗೊಂಡಿದೆ. ಸರ್ಕಾರಿ ಜಮೀನು ಹಂಚಿಕೆಯಾಗಿದೆ. ವಿಸ್ತೃತ ವರದಿ ಯೋಜನೆ ತಯಾರಿಕಾ ಹಂತದಲ್ಲಿದೆ.
6	ಬೀರುವಳ್ಳಿ / ಮಂಚಿಬೀಡು 1*8 ಎಂವಿಎ, 66/11 ಕೆವಿ	ಕೆ.ಆರ್.ಪೇಟೆ	ಸದರಿ ಪ್ರಸ್ತಾವನೆಯು 79ನೇ ಟಿಸಿಸಿಎಮ್ ನಲ್ಲಿ ಅನುಮೋದನೆಗೊಂಡಿದ್ದು, ಸರ್ಕಾರಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಕಾರ್ಯ ಪ್ರಗತಿಯಲ್ಲಿದೆ. ವಿಸ್ತೃತ ವರದಿ ಯೋಜನೆ ತಯಾರಿಕೆ ಹಂತದಲ್ಲಿದೆ.
7	ಈಚಲುಗುಡ್ಡ ಕಾವಲ್ / ಮಾದಾಪುರ / ಗಾಣದಹಳ್ಳಿ 1*8 ಎಂವಿಎ, 66/11 ಕೆವಿ	ಕೆ.ಆರ್.ಪೇಟೆ	ಸದರಿ ಪ್ರಸ್ತಾವನೆಯು 73ನೇ ಟಿಸಿಸಿಎಮ್ ನಲ್ಲಿ ಅನುಮೋದನೆಗೊಂಡಿದ್ದು, ಸರ್ಕಾರಿ ಜಮೀನು ಹಂಚಿಕೆಯಾಗಿ ಹಸ್ತಾಂತರಗೊಂಡಿದೆ. ಅಂದಾಜುಪಟ್ಟಿ ತಯಾರಿಕಾ ಹಂತದಲ್ಲಿದೆ.
8	ಬಾಳಿನಕೊಪ್ಪಲು (ಪಡುವಲಕೊಪ್ಪಲು) 66/11 ಕೆ.ವಿ.	ನಾಗಮಂಗಲ	ಸದರಿ ಪ್ರಸ್ತಾವನೆಯು 83ನೇ ಟಿಸಿಸಿಎಮ್ ನಲ್ಲಿ ಅನುಮೋದನೆಗೊಂಡಿದ್ದು, ಜಮೀನು ಗುರುತಿಸುವ ಕಾರ್ಯ ಪ್ರಗತಿಯಲ್ಲಿದೆ.

***